ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	722 (718)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	20.12.2021
ಉತ್ತರಿಸುವವರು	:	ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಅರಣ್ಯ ಇಲಾಖೆಯು ಕಳೆದ ಮೂರು ವರ್ಷಗಳಲ್ಲಿ ಸಂಗ್ರಹಿಸಲಾದ ಮೊತ್ತವೆಷ್ಟು;</td><td>ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಅಭಿವೃದ್ಧಿ ತೆರಿಗೆ/ ಶುಲ್ಕ ಸಂಗ್ರಹಣೆ ವಿವರಗಳು ಈ ಕೆಳಗಿನಂತಿವೆ.
<table>
<tr><th>ವರ್ಷ</th><th>ಸಂಗ್ರಹಿಸಿದ ಮೊತ್ತ(ರೂ.ಲಕ್ಷಗಳಲ್ಲಿ)</th></tr>
<tr><td>2018-19</td><td>2,638.41</td></tr>
<tr><td>2019-20</td><td>1,774.82</td></tr>
<tr><td>2020-21</td><td>1,645.20</td></tr>
<tr><td>2021-22 (ಅಕ್ಟೋಬರ್-ಮಾಹೆಯ ಅಂತ್ಯಕ್ಕೆ)</td><td>935.10</td></tr>
</table></td></tr>
<tr><td>ಆ)</td><td>ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸಂಗ್ರಹಿಸಲಾದ ತೆರಿಗೆಯ ಮೊತ್ತವನ್ನು ಯಾವ ಯಾವ ಉದ್ದೇಶಗಳಿಗಾಗಿ ವೆಚ್ಚ ಮಾಡಲಾಗುತ್ತದೆ;</td><td>ಕರ್ನಾಟಕ ಅರಣ್ಯ ಕಾಯ್ದೆ 1963 ಕಲಂ 98-Bರಂತೆ ಅರಣ್ಯಾಭಿವೃದ್ಧಿ ನಿಧಿಯಡಿಯ ಅನುದಾನವನ್ನು ಮುಖ್ಯವಾಗಿ ಅರಣ್ಯ ಪ್ರದೇಶಗಳಲ್ಲಿ ಅರಣ್ಯೀಕರಣ ಅಲ್ಲದೇ ಅರಣ್ಯ ಗಡಿಗಳ ಸಮೀಕ್ಷೆ ಹಾಗೂ ಗುರುತಿಸುವುದು ಮುಂತಾದ ಕಾಮಗಾರಿಗಳಿಗೆ ಉಪಯೋಗಿಸಲಾಗುತ್ತಿದೆ.</td></tr>
<tr><td>ಇ)</td><td>ಅರಣ್ಯ ಅಭಿವೃದ್ಧಿ ತೆರಿಗೆಯ ಮೂಲಕ ಸಂಗ್ರಹಿಸಲಾದ ಮೊತ್ತದಲ್ಲಿ 2019-20ರ ಸಾಲಿನಲ್ಲಿ 268.45 ಕೋಟಿಗಳ ವೆಚ್ಚವನ್ನು ಕೆ.ಎಫ್.ಡಿ.ಎಫ್.ಗೆ
ವರ್ಗಾಯಿಸದಿರಲು ಕಾರಣವೇನು?</td><td>ಆರ್ಥಿಕ ಇಲಾಖೆಯಿಂದ ಪಡೆದ ಮಾಹಿತಿಯಂತೆ ಅರಣ್ಯೀಕರಣ ಕಾರ್ಯಕ್ರಮಗಳಿಗೆ ಆದಾಯವನ್ನು ಸಂಗ್ರಹಿಸಲು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿದೆ. ಅರಣ್ಯೀಕರಣ ಕೆಲಸಗಳಿಗೆ ಹಾಗೂ ಇತರೆ ಪೂರಕ ಉದ್ದೇಶಗಳಿಗೆ ಅರಣ್ಯ ಇಲಾಖೆಗೆ ಅನುದಾನವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯ ಯೋಜನೆಯಡಿ ಒದಗಿಸಿ ಬಿಡುಗಡೆ ಮಾಡಲಾಗುತ್ತದೆ. ನಂತರ ಇದರಡಿ ಭರಿಸಿದ ಮೊತ್ತವನ್ನು ಮಹಾಲೇಖಪಾಲರ ಕಛೇರಿಯಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯ ಲೆಕ್ಕದಿಂದ ಕಳೆಯಲಾಗುತ್ತಿತ್ತು.

ಅರಣ್ಯ ಅಭಿವೃದ್ಧಿ ತೆರಿಗೆಯನ್ನು (ಪ್ರಸ್ತುತ ಅರಣ್ಯ ಅಭಿವೃದ್ಧಿ ಶುಲ್ಕ) ವಿಧಿಸಿರುವ ಅಧಿಸೂಚನೆಯನ್ನು ಪ್ರಶ್ನಿಸಿ M/s. National Mineral Development Corporation Ltd. ಮತ್ತು ಇತರರು, ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ವಿವಿಧ ರಿಟ್ ಅರ್ಜಿಗಳನ್ನು ದಾಖಲಿಸಿದ್ದು, ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ:03.12.2015ರಂದು ಅರ್ಜಿದಾರರುಗಳ ಪರ ತೀರ್ಪು ನೀಡಿ ಅರ್ಜಿದಾರರು ಪಾವತಿಸಿರುವ ಹಣವನ್ನು ಹಿಂದಿರುಗಿಸುವಂತೆ ಆದೇಶಿಸಿರುತ್ತದೆ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ವಿರುದ್ಧ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸರ್ಕಾರವು ಸಿವಿಲ್ ಅಪೀಲು ದಾಖಲಿಸಿದ್ದು, ಪ್ರಕರಣವು ಬಾಕಿಯಿರುತ್ತದೆ. ಪ್ರಕರಣವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವುದರಿಂದ 2019-20ರ ಸಾಲಿನಲ್ಲಿ ಆಗಿರುವ ವೆಚ್ಚವನ್ನು ಕರ್ನಾಟಕ ಅರಣ್ಯ ಅಭಿವೃದ್ಧಿ ನಿಧಿಯ ಲೆಕ್ಕದಿಂದ ಕಳೆಯಲು ಕ್ರಮ ತೆಗೆದುಕೊಂಡಿರುವುದಿಲ್ಲ.</td></tr>
</table>

ಸಂಖ್ಯೆ: ಅಪಜೀ 45 ಎಫ್‌ಡಿಪಿ 2021

(ಉಮೇಶ್ ವಿ. ಕತ್ತಿ)
ಅರಣ್ಯ ಹಾಗೂ ಆಹಾರ, ನಾಗರೀಕ ಸರಬರಾಜು
ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು